# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 259 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 13.09.2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಸರ್ಕಾರ ಕಿವುಡ ಮಕ್ಕಳ ಶಾಲೆಯ ವಿಶೇಷ ಶಿಕ್ಷಕರಿಗೆ ವಿಲೀನಾತಿ ನಿಯಮಗಳನ್ನು ರೂಪಿಸಿ ಪಿಂಚಣಿ ನೀಡುವುದಾಗಿ ಭರವಸೆ ಸಂಖ್ಯೆ:ಮಮಇ/77/ಪಿಹೆಚ್‌ಪಿ/2022ರಲ್ಲಿ ಭರವಸೆ ನೀಡಿದ್ದು, ದಿನಾಂಕ:06.01.2022ರಂದು ಸಚಿವ ಸಂಪುಟ ಅನುಮೋದನೆ ನೀಡಿದ್ದರೂ ಸಹ ಈವರೆಗೂ ವಿಲೀನಾತಿ ನಿಯಮಗಳನ್ನು ರೂಪಿಸಿ, ಪಿಂಚಣಿ ನೀಡಲುಕ್ರಮ ಕೈಗೊಳ್ಳದೆ ಇರಲು ಕಾರಣಗಳೇನು: | ಸರ್ಕಾರಿ ಕಿವುಡ ಮಕ್ಕಳ ವಸತಿ ಶಾಲೆಯ ಸಿಬ್ಬಂದಿಗಳಿಗೆ ವಿಲೀನಾತಿಗೆ ಸಂಬಂಧಿಸಿದಂತೆ, ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ ಮಾದರಿಯಲ್ಲಿ ಪ್ರತ್ಯೇಕವಾದ ಕರಡು ನಿಯಮಾವಳಿಗಳ ರಚನೆ ಕ್ರಮ ಪ್ರಕ್ರಿಯೆಯಲ್ಲಿದೆ. |
| ಆ. | ಕಳೆದ ಅಧಿವೇಶನದ ಉಪವೇಶನದಲ್ಲಿ ಶೀಘ್ರವಾಗಿ ವಿಲೀನಗೊಳಿಸಿ, ಪಿಂಚಣಿ ನೀಡುವುದಾಗಿ ಸರ್ಕಾರ ಭರವಸೆ ನೀಡಿದ್ದರೂ ಸರ್ಕಾರದ ಪತ್ರ ಸಂಖ್ಯೆ:ಇ/142/ಪಿಹೆಚ್‌ಪಿ/2021ರಂತೆ ಈವರೆಗೂ ವಿಲೀನಗೊಳಿಸಿ ಜೇಷ್ಠತೆ ನಿಗದಿಪಡಿಸಲು ಕ್ರಮ ಕೈಗೊಂಡಿರುವುದಿಲ್ಲ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉದಾಸೀನತೆ ಧೋರಣೆಯಿಂದ ಆರ್ಥಿಕ ಸಂಕಷ್ಟದಲ್ಲಿರುವ ನಿವೃತ್ತ ಶಿಕ್ಷಕರಿಗೆ ಕೂಡಲೇ ಪಿಂಚಣಿ ನೀಡಲು ಇನ್ನೆಷ್ಟು ದಿನಗಳಲ್ಲಿ ವಿಲೀನಗೊಳಿಸಲಾಗುವುದು: | 1. ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯಲ್ಲಿ ನಿವೃತ್ತಿ ಹೊಂದಿದ 06 ಸಿಬ್ಬಂದಿಗಳ ಮೂಲ ಸೇವಾವಹಿಗಳನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ದಿನಾಂಕ:20.09.2017ರಂದು ಸಲ್ಲಿಸಲಾಗಿರುತ್ತದೆ. (ಅನುಬಂಧ-2ರಲ್ಲಿ ಲಗತ್ತಿಸಿದೆ)<br>2. ತದನಂತರ ದಿನಾಂಕ:26.04.2022ರಂದು ಮತ್ತೊಬ್ಬ ನಿವೃತ್ತಿ ಸಿಬ್ಬಂದಿಯ ಮೂಲ ಸೇವಾವಹಿಗಳನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ. (ಅನುಬಂಧ-3ರಲ್ಲಿ ಲಗತ್ತಿಸಿದೆ)<br>3. ಹೀಗೆ ಒಟ್ಟು 07 ನಿವೃತ್ತ ಸಿಬ್ಬಂದಿಗಳ ಮೂಲ ಸೇವಾವಹಿಗಳನ್ನು ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ |
| ಇ. | ಒಂದು ವೇಳೆ ಸದರಿ ಶಿಕ್ಷಕರನ್ನು ವಿಲೀನಗೊಳಿಸಿ, ಆದೇಶಿಸಿದ್ದಲ್ಲಿ, ಆದೇಶದ ಪ್ರತಿಗಳನ್ನು ಒದಗಿಸುವುದು. | ಸದರಿ ಶಾಲೆಯ ಶಿಕ್ಷಕರನ್ನು ವಿಲೀನಗೊಳಿಸಿ ಸರ್ಕಾರದಿಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ. |

**ಸಂಖ್ಯೆ: ಮಮಇ 195 ಪಿಹೆಚ್‌ಪಿ 2022**

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

(34)

ಕರ್ನಾಟಕ ಸರಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ನೆಲಮಹಡಿ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು 01 ದೂರವಾಣಿ ಸಂಖ್ಯೆ: 080-22866066, 08022866046 ಇ-ಮೇಲ್ ವಿಳಾಸ: dirdwdscka@gmail.com, dir-dwdsc-ka@nic.in

ಸಂಖ್ಯೆ: ವಿಹಿನಾಸಇ/ಸಿ1/08/2017-18 /1554 ದಿನಾಂಕ:20.09.2017

ಮಹಾಲೇಖಪಾಲರು (ಎ&ಇ),
ಕರ್ನಾಟಕ,
ಬೆಂಗಳೂರು – ಇವರಿಗೆ.

ಮಾನ್ಯರೇ,

ವಿಷಯ:- ಸರ್ಕಾರಿ ವಸತಿಯುತ ಕಿವುಡು ಮತ್ತು ಮೂಕ ಮಕ್ಕಳ ಶಾಲೆ, ಇಂದಿರಾನಗರ, ಬೆಂಗಳೂರು ಇಲ್ಲಿನ ನಿವೃತ್ತ ಸಿಬ್ಬಂದಿಗಳ ಮೂಲ ಸೇವಾ ಪುಸ್ತಕಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ಸಂ:ಮಮಇ/119/ಪಿಹೆಚ್‌ಪಿ/2017(ಪಿ) ದಿ:05.09.2017

*****

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ವಸತಿಯುತ ಕಿವುಡು ಮತ್ತು ಮೂಕ ಮಕ್ಕಳ ಶಾಲೆ, ಇಂದಿರಾನಗರ, ಬೆಂಗಳೂರು ಇಲ್ಲಿನ ವಯೋ ನಿವೃತ್ತಿ ಹೊಂದಿದ ಸಿಬ್ಬಂದಿಗಳ ನೇಮಕಾತಿ ಆದೇಶದ ದೃಢೀಕರಣ ಮತ್ತು ಅನುಮೋದನೆ ದಿನಾಂಕದೊಂದಿಗೆ ಸೇವಾ ಪುಸ್ತಕಗಳನ್ನು ತಮಗೆ ಸಲ್ಲಿಸಲು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಇಲಾಖೆಗೆ ನಿರ್ದೇಶನ ನೀಡಲಾಗಿರುತ್ತದೆ.

ಪ್ರಸ್ತಾಪಿತ ಶಾಲೆಯ ಈ ಕೆಳಕಂಡ ವಯೋ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ನೇಮಕಾತಿ ಆದೇಶದ ದೃಢೀಕರಣ ಮತ್ತು ಅನುಮೋದನೆಯ ಮಾಹಿತಿಯೊಡನೆ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗುತ್ತಿದೆ.

ಸಿಬ್ಬಂದಿಗಳ ವಿವರ:-

| ಕ್ರಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀಮತಿ ತಿಲಕಂ ಎಸ್ | ಸಹ ಶಿಕ್ಷಕರು |
| 02 | ಶ್ರೀಮತಿ ವಸಂತೆ | ಆಯಾ |
| 03 | ಶ್ರೀಮತಿ ಇಂದುಮತಿ ರಾವ್ | ಪದವಿಧರ ಸಹ ಶಿಕ್ಷಕರು |
| 04 | ಶ್ರೀಮತಿ ಭವಾನಿ.ಪಿ | ಸಹ ಶಿಕ್ಷಕರು |
| 05 | ಶ್ರೀಮತಿ ಕೋಮಲ [illegible] | ಸಹ ಶಿಕ್ಷಕರು |
| 06 | ಶ್ರೀಮತಿ ರೂಬಿ [illegible] | ಸಹ ಶಿಕ್ಷಕರು |

ಮಹಾಲೇಖಪಾಲರ ಕಚೇರಿ (ಲೆಕ್ಕ ಮತ್ತು ಹಕ್ಕು), ಕರ್ನಾಟಕ, ಬೆಂಗಳೂರು
25 SEP 2017
ಟಪಾಲ್/तपाल/TAPPAL
Office of the Accountant General (A & E) Karnataka, Annexe Building, Bengaluru

ತಮ್ಮ ವಿಶ್ವಾಸಿ,

ನಿರ್ದೇಶಕರು, 20/9/17
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು.

ಪ್ರತಿಯನ್ನು: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.

S3/ F/SU/Puttegowda sir/2017

ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ

ನಿರ್ದೇಶಕರ ಕಛೇರಿ, ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001

ದೂ.ಸಂ.080-22860907 ಫ್ಯಾಕ್ಸ್:080-22868347 ಇ-ಮೇಲ್ ವಿಳಾಸ :dirdwdscka@gmail.com

ಸಂಖ್ಯೆ:ವಿಹಿನಿ/ಯೋಜನೆ/ಸಿ8/06/2019-20 ದಿನಾಂಕ:26.04.2022

15 MAY 2022 TAPPAL

ಮಹಾಲೇಖಪಾಲರು
ಕರ್ನಾಟಕ,
ಬೆಂಗಳೂರು-ಇವರಿಗೆ

ಮಾನ್ಯರೆ,

**ವಿಷಯ:** ಶ್ರೀಮತಿ ವಿಜಯಕುಮಾರಿ, ನಿವೃತ್ತ ಕರಕುಶಲ ಶಿಕ್ಷಕ ಇವರಿಗೆ ಪಿಂಚಣಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಮಮಇ 389 ಪಿಹೆಚ್‌ಪಿ2014, ಬೆಂಗಳೂರು, ದಿನಾಂಕ:23.07.2016(ಪ್ರತಿ ಲಗತ್ತಿಸಿದೆ)
2. ಸರ್ಕಾರಿ ಆದೇಶ ಸಂಖ್ಯೆ: ವಿಹಿನಿ/ಸಕಿಮೂಶಾಲೆ/ಬೆಂನ/2021-22/24 ದಿನಾಂಕ:10.03.2022 (ಪ್ರತಿ ಲಗತ್ತಿಸಿದೆ)
3. ಅಧೀಕ್ಷಕರು ಕಛೇರಿ, ಹಂಸಧ್ವನಿ (ಸರ್ಕಾರಿ) ಕಿವುಡ ಮತ್ತು ಮೂಕ ಮಕ್ಕಳ ಶಾಲೆ ಇಂದಿರಾನಗರ, ಬೆಂಗಳೂರು ರವರ ಪತ್ರ ಸಂಖ್ಯೆ:ವಿಹಿನಾಸಇ/ಸಕಿಮೂಮಶಾಲೆ /ಬೆಂನ/2020-21/57 ದಿನಾಂಕ:26.02.2021(ಪ್ರತಿ ಲಗತ್ತಿಸಿದೆ)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ಮತ್ತು (2) ರಲ್ಲಿನ ಸರ್ಕಾರದ ಆದೇಶಗಳಲ್ಲಿ ಹಿಂದಿನ ಹಂಸಧ್ವನಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆಯನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗಿದೆ.

ಆ ಶಾಲೆಯ ಶ್ರೀಮತಿ ವಿಜಯಕುಮಾರಿ, ಕರಕುಶಲ ಶಿಕ್ಷಕರು ಇವರು ದಿನಾಂಕ:30-06-2016 ರಂದು ನಿವೃತ್ತಿ ಹೊಂದಿರುತ್ತಾರೆಂದು ಹಾಗೂ ಅವರಿಗೆ ಪಿಂಚಣಿ ಸೌಲಭ್ಯ ಒದಗಿಸುವ ಕ್ರಮ ವಹಿಸುವಂತೆ ಆ ಶಾಲೆಯ ಅಧೀಕ್ಷಕರು ಉಲ್ಲೇಖ(3) ರಲ್ಲಿನ ಅವರ ಪತ್ರದ ದಿನಾಂಕ:26-02-2021 ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಶ್ರೀಮತಿ ವಿಜಯಕುಮಾರಿ ನಿವೃತ್ತ ಕರಕುಶಲ ಶಿಕ್ಷಕಿ ಇವರ ಮೂಲ ಸೇವಾ ಪುಸ್ತಕವನ್ನು ಮತ್ತು ನಿವೃತ್ತಿ ವೇತನಕ್ಕಾಗಿ ಸಲ್ಲಿಸಬಹುದಾದ ಅರ್ಜಿನಮೂನೆಯನ್ನು (ತ್ರಿಪ್ರತಿಯಲ್ಲಿ) ಈ ಪತ್ರದೊಂದಿಗೆ ಸಲ್ಲಿಸಲಾಗಿದೆ.

ಶ್ರೀಮತಿ ವಿಜಯಕುಮಾರಿ, ಇವರನ್ನು ನಿವೃತ್ತಿ ನಂತರವೂ ಮುಂದುವರೆಸಿ, ಅವರಿಗೆ ನಿಯಮಗಳಿಗೆ ವಿರುದ್ಧವಾಗಿ ಒಟ್ಟು ರೂ.3,92,607/-ಗಳನ್ನು ಪಾವತಿಸಿದ್ದು, ಅದನ್ನು ಅವರ ನಿವೃತ್ತಿ ವೇತನದ ಸೌಲಭ್ಯದಿಂದ ಕಟಾಯಿಸುವಂತೆ, ಉಲ್ಲೇಖ (3)ರಲ್ಲಿನ ಅಧೀಕ್ಷಕರ ಪತ್ರದಲ್ಲಿ (ಪ್ರತಿ ಲಗತ್ತಿಸಲಾಗಿದೆ) ತಿಳಿಸಿರುತ್ತಾರೆ. ಈ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯದಿಂದ ಕಟಾಯಿಸುವಂತೆ ಕೋರಲಾಗಿದೆ.

ರವಾನಿಸಲಾಗಿದೆ
ದಿನಾಂಕ 4/5/2022
ಸಹಿ.........

..2 ಕ್ಕೆ

ಉಲ್ಲೇಖ(1) ಮತ್ತು (2) ರಲ್ಲಿನ ಸರ್ಕಾರದ ಆದೇಶಗಳಲ್ಲಿ ಈ ಶಾಲೆಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದ್ದರೂ, ಈ ಶಾಲೆಯ ಸಿಬ್ಬಂದಿಗಳಿಗೆ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪತ್ರದ ಸಂಖ್ಯೆ:ಮಮಇ 142 ಪಿಹೆಚ್‌ಪಿ 2021 ದಿನಾಂಕ:19-12-2021 ನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ,
ಬೆಂಗಳೂರು.